ಉಪಾಧ್ಯಕ್ಷರು : ಈಗ ಪ್ರಶ್ನೋತ್ತರಗಳು.

ಪ್ರಶ್ನೆ 569

ಪ್ರಶ್ನೆ 632

ಪ್ರಶ್ನೆ 514

ಪ್ರಶ್ನೆ 630 (ಸದಸ್ಯರುಗಳು ಗೈರುಹಾಜರಾಗಿದ್ದರು)

ಪ್ರಶ್ನೆ 494ರ ಬಗ್ಗೆ ಸಮಯ ಕೇಳಿರುವುದರಿಂದ ಮುಂದೆ ತೆಗೆದುಕೊಳ್ಳಲಾಗುತ್ತದೆ.

ಪ್ರಶ್ನೆ 602 (ಸದಸ್ಯರು ಗೈರುಹಾಜರಾಗಿದ್ದರು)

ಪ್ರಶ್ನೆ 608ರ ಬಗ್ಗೆ ಸಮಯ ಕೇಳಿರುವುದರಿಂದ ಮುಂದೆ ತೆಗೆದುಕೊಳ್ಳಲಾಗುತ್ತದೆ.

ಬಾಲ ಕಾರ್ಮಿಕ ಕಲ್ಯಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮದ ಬಗ್ಗೆ.

562. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬಾಲ ಕಾರ್ಮಿಕರ ಸಂಖ್ಯೆ ಎಷ್ಟು ?

ಆ) ಇವರುಗಳ ಕಲ್ಯಾಣಕ್ಕಾಗಿ ಸರ್ಕಾರದ ಮುಂದೆ ಇರುವ ಯೋಜನೆಗಳೇನು?

ಇ) ಕಳೆದ ಎರಡು ವರ್ಷಗಳಿಂದ ಈ ಕಾರ್ಯಕ್ರಮಕ್ಕಾಗಿ ಸರ್ಕಾರ ಖರ್ಚು ಮಾಡಿರುವ ಹಣ ಎಷ್ಟು?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ಸಚಿವರು) :–

ಅ) 9,66,339 (1981ರ ಜನಗಣತಿಯ ಮಾಹಿತಿಯಂತೆ)

ಆ) ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ಪ್ರತ್ಯೇಕ ಯೋಜನೆಗಳು ಯಾವುದೂ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ಈ ಒಂದು ಚೈಲ್ಡ್ ಲೇಬರ್ ವೆಲಫೇರ್ ಸ್ಕೀಮ್ ಯಾವುದೂ ಇಲ್ಲ ಎಂದು ತಮ್ಮ ಉತ್ತರದಲ್ಲಿ ನಮೂದು ಮಾಡಿದ್ದಾರೆ. ಈಗ ನಾನು ಅವರಿಗೆ ಕೇಳಬಯಸುವುದು ಏನೆಂದರೆ, ಯಾವುದೇ ಒಂದು ವೆಲ್‌ಫೇರ್ ಸ್ಕೀಮ್ ಈ ಚೈಲ್ಡ್ ಲೇಬರ್ ಬಗ್ಗೆ ಸರ್ಕಾರದ ಮುಂದೆ ಇದೆಯೇ ಎಂಬುದು ಒಂದು, ಇನ್ನು ಎರಡನೆಯದು ಈ ಚೈಲ್ಡ್ ಲೇಬರ್ ಪ್ರಾಕ್ಟೀಸ್ ಆದಷ್ಟು ಮಟ್ಟಿಗೆ ತಡೆಯಬೇಕೆಂದು ಎಲ್ಲಾ ಸರ್ಕಾರಗಳು ಪ್ರಯತ್ನ ಮಾಡುತ್ತಿವೆ ಆದರೆ ಈ ಫಿಗರ್ಸ್ ನೋಡಿದರೆ 1981ರ ಸೆನ್ಸಸ್ ಪ್ರಕಾರ 9,66,339 ಇದೆ. ಇದರಲ್ಲಿ ನಾವು ವಿಫಲರಾಗಿದ್ದೇವೆಂದು ಹೇಳಬೇಕಾಗಿದೆ. ಈ ದೃಷ್ಟಿಯಿಂದ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂಬ ವಿಚಾರದ ಬಗ್ಗೆ ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಬಯಸುತ್ತೇನೆ.

ಶ್ರೀ ಎ.ಎಸ್. ನಾಡಗೌಡ : ಅಧ್ಯಕ್ಷರೆ, ಈಗಾಗಲೇ ಶ್ರೀಮಾನ್ ದೇಶಪಾಂಡೆಯವರು ಕೇಳಿದ ಹಾಗೆ ನಮ್ಮ ಇಲಾಖೆಯಿಂದ ಈಗಾಗಲೇ ಕ್ರಮವನ್ನು ಕೈಗೊಳ್ಳಲಾಗುತ್ತಿದೆ. ಪ್ರಾಹಿಬಿಟರಿ ಆಂಡ್ ರೆಗ್ಯುಲೇಟರಿ ಫಂಕ್ಷನ್ಸ್ ನಾವು ಮಾಡುತ್ತಿದ್ದೇವೆ. ಈ ಒಂದು ಚೈಲ್ಡ್ ಲೇಬರ್ ಪ್ರಾಹಿಬಿಷನ್ ಅಂಡ್ ರೆಗ್ಯುಲೇಷನ್ ಆ್ಯಕ್ಟ್ ಏನಿದೆ, ಇದು ಈಗಾಗಲೇ ಜಾರಿಯಲ್ಲಿದೆ; ಇದು 1980ರಲ್ಲೇ ಜಾರಿಗೆ ಬಂದಿದೆ. ಯಾವುದೇ ಚೈಲ್ಡ್ ಬಿಲೋ ಏಜ್ ಆಫ್ 14 ಇಯರ್ಸ್ ಲೇಬರ್ ಆಗಿ ಕೆಲಸ ಮಾಡುತ್ತಿರಲಿ ಅಲ್ಲಿ ನಾವು ಕ್ರಮ ಕೈಗೊಳ್ಳುತ್ತಿದ್ದೇವೆ. ಆದರೆ, ನಿಜವಾಗಿಯೂ ಹೇಳಬೇಕೆಂದರೆ ನಮ್ಮ ಇಲಾಖೆಯಿಂದ ವೆಲ್‌ಫೇರ್ ಸ್ಕೀಮುಗಳು ಅವರಿಗೋಸ್ಕರ ಯಾವುದೂ ಇಲ್ಲ. ಅವರ ವೆಲ್‌ಫೇರ್ ಸ್ಕೀಮ್ ವಿಚಾರದಲ್ಲಿ ಸರ್ಕಾರ ಯೋಚನೆ ಮಾಡುವಂಥ ಹಂತದಲ್ಲಿದೆ, ಆದರ ಬಗ್ಗೆ ನಾವು ಯೋಚನೆ ಕೂಡ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ :– ಸನ್ಮಾನ್ಯ ಅಧ್ಯಕ್ಷರೇ, 1981ರಲ್ಲಿ ನಡೆದಿರತಕ್ಕಂಥ ಜನಗಣತಿ ಪ್ರಕಾರ 9,66,339 ಇದೆ ಎಂದು ಹೇಳಿದ್ದೀರಿ. ಈಗ ಒಂಬತ್ತು ವರ್ಷ ಮುಗಿದಿದೆ. 1991ರ ಜನಗಣತಿ ಬರುತ್ತಿದೆ. 1981ರಲ್ಲಿಯೇ ಸುಮಾರು ಹತ್ತಿರ ಹತ್ತಿರ 10 ಲಕ್ಷದವರೆಗೆ ಇರಬೇಕಾಗಿದ್ದರೆ, ಈಗ ಈ ಸಂಖ್ಯೆ 12–13 ಲಕ್ಷ ಇರಲಿಕ್ಕೆ ಸಾಧ್ಯತೆ ಇದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ನಮ್ಮ ರಾಜ್ಯದಲ್ಲಿ ಬಾಲಕಾರ್ಮಿಕರು ಇದ್ದರೂ ಸಹ ಇವರ ಕಲ್ಯಾಣಕ್ಕೋಸ್ಕರ ಇರತಕ್ಕಂಥ ಯೋಜನೆಗಳು ಯಾವುದೂ ಇಲ್ಲ ಅಂದರೆ ಅದು ನಮಗೆ ಗೌರವವನ್ನು ತರತಕ್ಕಂತಾದ್ದಲ್ಲ. ಅದೂ ಸಹ 20ನೇ ಶತಮಾನದಲ್ಲಿರತಕ್ಕಂಥ ನಮ್ಮ ದೇಶಕ್ಕೆ ನಮ್ಮ ಸಮಾಜಕ್ಕೆ ಗೌರವವನ್ನು ತರತಕ್ಕಂತಾದ್ದಲ್ಲ.

ಶ್ರೀ ಎ.ಎಸ್. ನಾಡಗೌಡ :– ಚೈಲ್ಡ್ ವೆಲ್‌ಫೇರ್ ಸಲುವಾಗಿ ನಮ್ಮ ಇಲಾಖೆಯಿಂದ ಯಾವುದೇ ಸ್ಕೀಮ್ ಇಲ್ಲ ಎಂದು ಹೇಳುತ್ತಿದ್ದೇನೆ. ಶಿಶು ಕಲ್ಯಾಣ ಯೋಜನೆಯಲ್ಲಿ ಇರಬಹುದು.

ಉಪಾಧ್ಯಕ್ಷರು :– ಇದು ಚೈಲ್ಡ್ ವೆಲ್‌ಫೇರ್ ಬಗ್ಗೆ ಅಲ್ಲ, ಇಲ್ಲಿರತಕ್ಕದ್ದು ವೆಲ್‌ಫೇರ್ ಆಫ್ ದಿ ಚೈಲ್ಡ್ ಲೇಬರ್ ಬಗ್ಗೆ.

ಶ್ರೀ ಸಿ. ಬೈರೇಗೌಡ :– ವುಮೆನ್ ಅಂಡ್ ಚೈಲ್ಡ್ ವೆಲ್‌ಫೇರ್, ಅದು ಮಕ್ಕಳು ಹುಟ್ಟಿದಾಗಿನಿಂದ ಬರತಕ್ಕದ್ದು, ಆ ಅವಧಿಯಲ್ಲಿ ಇರುತ್ತದೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಇದು ನಮಗೆ ಯಾರಿಗೂ ಕೂಡ ಗೌರವ ತರತಕ್ಕ ವಿಚಾರವಲ್ಲ. ಆದ್ದರಿಂದ ಇದನ್ನು ಯಾರೇ ಮಾಡಿರಲಿ ಅದರ ಬಗ್ಗೆ ....

ಶ್ರೀ ಟಿ.ಎಂ. ಮಂಜುನಾಥ್ :– ಇವತ್ತು ಕಳೆದ 10 ವರ್ಷಗಳ ಬಗ್ಗೆ ತಾವು ಕೇಳುತ್ತಿದ್ದೀರಿ. ಆದರೆ ಕಳೆದ 5 ವರ್ಷದಿಂದ ಈ ಕಡೆ ಕೂತಿದ್ದಾಗ ನೀವು ಏನು ಮಾಡುತ್ತಿದ್ದಿರಿ?

ಶ್ರೀ ಸಿ. ಬೈರೇಗೌಡ :– ನೀವೂ ಕೂಡ ಇಲ್ಲೇ ಕೂತಿದ್ದೀರಿ. ಅದನ್ನು ಮರೆತು ಸುಮ್ಮನೆ ಮಾತನಾಡುವುದಕ್ಕೆ ಹೋಗಬೇಡಿ. ಬೇರೆಯವರು ಮಾಡದಿದ್ದರೆ ಅದು ಸರಿ ಎಂದು ನಾನು ಹೇಳುವುದಿಲ್ಲ. ಬೇರೆಯವರು ಮಾಡದಿದ್ದರೆ ಅದೂ ಕೂಡ ತಪ್ಪು.

ಉಪಾಧ್ಯಕ್ಷೆಣಿಯವರು :– ಬೇರೆಯವರು ಮಾಡಲಿಲ್ಲ, ನೀವಾದರೂ ಮಾಡಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ ನಮ್ಮ ಸರ್ಕಾರ ಇದ್ದಾಗಲೂ ಮಾಡಲಿಲ್ಲ ಎಂದರೆ ಅದೂ ಕೂಡ ತಪ್ಪು. ಆದ್ದರಿಂದ ದಯವಿಟ್ಟು ಈಗಲಾದರೂ ತಾವು ಈ ಬೃಹದಾಕಾರದ ಸಂಖ್ಯೆಯನ್ನು ಗಮನಿಸಿ, ಇವರ ಅಭಿವೃದ್ಧಿ ಸಲುವಾಗಿ ಮತ್ತು ಇವರ ಸಲುವಾಗಿ ರೆಗ್ಯುಲೇಟರಿ ಮತ್ತು ಪ್ರೊಹಿಬಿಟರಿ ಕಾರ್ಯಕ್ರಮಗಳನ್ನು ಮಾಡುವುದರ ಜೊತೆಗೆ ವೆಲ್‌ಫೇರ್ ದೃಷ್ಟಿಯಿಂದ ಕೂಡ ಇವರ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎ.ಎಸ್. ನಾಡಗೌಡ :– ಈ ಚೈಲ್ಡ್ ವೆಲ್‌ಫೇರ್ ಮತ್ತು ಚೈಲ್ಡ್ ಲೇಬರ್‌ಗೆ ಸಂಬಂಧಪಟ್ಟಂತೆ ಸರ್ಕಾರ ಏನು ಕಾನೂನುಗಳನ್ನು ರಚನೆ ಮಾಡಿದೆ ಅದನ್ನು ಕೇವಲ ಅನುಷ್ಠಾನಕ್ಕೆ ತರುವುದರಲ್ಲಿ ಮಾತ್ರ ಈ ಮಕ್ಕಳನ್ನು ಶೋಷಣೆಯಿಂದ ತಪ್ಪಿಸುವುದಕ್ಕಾಗುವುದಿಲ್ಲ. ಇದಕ್ಕೆ ಸಮಾಜದ ಸಹಕಾರ ಕೂಡ ಬೇಕು; ಆ ಮಗು ಯಾವ ಕಾರಣದಿಂದ ಶೋಷಣೆಗೆ ಒಳಗಾಗುತ್ತಿದೆ ಎಂಬುದನ್ನು ನಾವು ನೋಡಬೇಕು. ಅವರ ಮನೆತನ ಹಾಗೂ ಅವರ ನಿಜವಾದ ಜೀವನ ಈ ಪ್ರಪಂಚದಲ್ಲಿ ಯಾವ ರೀತಿ ಸಾಗುತ್ತಿದೆ ಎಂಬುದನ್ನು ನೋಡಬೇಕಾಗುತ್ತದೆ. ನಾವು ಕೇವಲ ಕಾನೂನು ಮಾಡಿದ್ದೇವೆಂದು ಅದನ್ನು ಸ್ಟಿಕ್ಟ್ ಆಗಿ ಜಾರಿ ಮಾಡಿದರೆ ನಾವು ಇಲ್ಲಿ ಕೂತಿರುವವರು ಖದೀಮರೆಂದು ಹೇಳಬೇಕಾಗುತ್ತದೆ. ಆದ್ದರಿಂದ ತಾವು ಏನು ಸಲಹೆಗಳನ್ನು ಕೊಟ್ಟಿದ್ದೀರಿ ಅವನ್ನು ಗಮನದಲ್ಲಿಟ್ಟುಕೊಂಡು ಮುಂದೆ ಒಳ್ಳೆಯ ಕಾರ್ಯಕ್ರಮಗಳನ್ನು ಕೊಡುವಂತಹ ಪ್ರಯತ್ನ ಮಾಡುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ.